**<u>ಸಾಕ್ಷಿಯನ್ನು ದಿಃ 24.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಸ್ ಜಿ ವಕೀಲರಿಂದಃ-</u>**

ನಾನು 4 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಕೇಸ್ ನ ವಾದಿ ಸುಮಾ ನನ್ನ ಮಗಳು ಇದ್ದು, ಅವರು ಏನು ಕೇಸು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾದಿ ಸುಮಾ ರವರಿಗೆ ದಾವಾ ಸ್ವತ್ತಿಗಳಲ್ಲಿ ಕೆಲವೊಂದು ಆಸ್ತಿಗಳು ವಾದಿಗೆ ಒಟ್ಟು ಕುಟುಂಬದ ಆಸ್ತಿಗಳು ಇನ್ನೂ ಕಲವೊಂದು ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಗಂಡ ಲೇಟ್ ಕೃಷ್ಣೇ ಅರಸ್ ಎಂದರೆ ಸರಿ, ಅವರು ಈಗ ಜೇಂವತ ಇರುವುದಿಲ್ಲ. ನನ್ನ ಗಂಡ ವಾದಿ ಮತ್ತು ಪ್ರತಿವಾದಿಗಳನ್ನು ವಾರಸುದಾರರಾಗಿ ಬಿಟ್ಟು ತೀರಿಕೊಂಡಿರುತ್ತಾರೆ. ದಾವಾ ಸ್ವತ್ತುಗಳು ಗಂಡ ಕೃಷ್ಣೇಅರಸ್ ರವರು ಸಾಯುವಾಗ ಅವರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ನನ್ನ ಗಂಡನಿಗೆ ಯಾವುದೆ ಆಸ್ತಿಗಳು ಇರಲಿಲ್ಲ ಎಂದು ಬರೆಸಿ ಹಾಕಿಲ್ಲ. ನನ್ನ ಗಂಡ ಜೀವಂತ ಇರುವುವಾಗ ನನ್ನ ಮತ್ತು ಮಕ್ಕಳ ನಡುವೆ ಯಾವುದೆ ಭಾಗ ಆಗಿಲ್ಲ ಎಂದರೆ ಸರಿ. ಹೀಗೆ ಭಾಗ ಆಗದೆ ಇರುವ ಕಾರಣ ನಾವೆಲ್ಲರೂ ಅವು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನು ಮನೆಯ ಯಜಮಾನಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ.

ನನ್ನ ಗಂಡನಿಗೆ ಸರ್ವೆ ನಂ. 23/2 ರಲ್ಲಿ 2 ಎಕರೆ, 22/2 ರಲ್ಲಿ 2 ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ನನ್ನ ಗಂಡ ಕೆಲವು ಆಸ್ತಿಗಳನ್ನು ಸೂರಣ್ಣ ಎಂಬುವವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ವಾರಂಚಿಯ ಜಮೀನಲ್ಲಿ ಬೋರ್ ಬೆಲ್, ಭಾವಿ ಇದೆ ಎಂದರೆ ಸರಿಯಲ್ಲ. 2 ಟೊಬ್ಯಾಕೊ ಬೋರ್ಡ ಇದೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಗಂಡ ಜೀವಂತ ಇದ್ದಾಗ ಬೇರೆಯವರಿಗೆ ಮಾರಾಟ ಮಾಡಿದ್ದರು ಸರಿ. ಹಾಗೆ ಮಾರಾಟ ಮಾಡಿ ಬಂದ ಹಣದಿಂದ ನನ್ನ ಗಂಡ ದಾವಾ ಸ್ವತ್ತುಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಈಗ ನನ್ನ ಹೆಸರಿನಲ್ಲಿ

ಇರುತ್ತವೆ. ಖರೀದಿಯಿಂದ ಬಂದ ಹಣದಿಂದ ದಾವಾ ಸ್ವತ್ತುಗಳನ್ನು ನನ್ನ ಹೆಸರಿನಲ್ಲಿ ನನ್ನ ಗಂಡ ಇರುವಾಗ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ಖರೀದಿ ಮಾಡಲು ಹಣ ಎಲ್ಲಿಂದ ಬಂದಿತ್ತು ಎಂದು ತಕರಾರಿನಲ್ಲಿ ಬರೆಸಿಲ್ಲ. ನನ್ನ ಗಂಡ ನನ್ನ ಹೆಸರಿನಲ್ಲಿ ಸ್ವತ್ತನ್ನು ಖರೀದಿ ಮಾಡಿರುವುದನ್ನು ಉಪಯೋಗಿಸಿಕೊಂಡು ಅವು ನನ್ನ ಸ್ವಯಾರ್ಜಿತ ಸ್ವತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಆದಾಯದ ಮೂಲದಿಂದ ಸದರಿ ಸ್ವತ್ತುಗಳನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಿದ್ದೇನೆ ಎಂದು ತೋರಿಸಲು ಯಾವುದೆ ದಾಖಲೆಗಳು ಇಲ್ಲ ಎಂದರೆ ಸರಿ.

ದಾವಾ ಐಟಂ 1 ರಿಂದ 5 ರ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು, ಅವು ನನ್ನ ಸ್ವಯಾರ್ಜಿತ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಕೆ.ಆರ್ ನಗರ ತಾಲ್ಲೂಕು, ಕೊಗಲೂರಿನಲ್ಲಿ ಕೆಲವೊಂದು ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. ನನ್ನ ಗಂಡ ಮೂಲತಃ ಕೊಗಲೂರಿನವರು. ಕೊಗಲೂರಿನಲ್ಲಿ ನನ್ನ ಗಂಡನಿಗೆ ಯಾವುದೆ ಚರಾಸ್ತಿ ಸ್ಥಿರಾಸ್ತಿ ಇಲ್ಲ ಎಂದು ತಕರಾರಿನಲ್ಲಿ ಹೇಳಿ ಬರೆಸಿಲ್ಲ. ಕೊಗಲೂರಿನಲ್ಲಿರುವ ಇದ್ದ ಆಸ್ತಿಯನ್ನು ಮಾರಾಟ ಮಾಡಿ ಅದರಿಂದ ಬಂದಂತಹ ಆದಾಯದಿಂದ ಹುಣಸೂರಿನ ಗೋಕುಲ ರಸ್ತೆಯ ಐಟಂ ನಂ. 6 ರ ಸ್ವತ್ತನ್ನು 2 ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಆದರೆ ಕೊಗಲೂರಿನಲ್ಲಿ ಯಾವುದೆ ಅಸ್ತಿ ಇರಲಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ಬ್ಯಾಂಕ್ ನಿಂದ ಸಾಲ ಪಡೆದು ಕಟ್ಟಿಸಿರುತ್ತಾನೆ ಎಂದು ನುಡಿಯುತ್ತಾರೆ. ಯಾವ ಬ್ಯಾಂಕ್ ನಿಂದ ಎಷ್ಟು ಸಾಲ ಪಡೆದಿದ್ದ ಎಂದು ನನಗೆ ನೆನಪಿಲ್ಲ. ಸದರಿ ವಿಷಯವನ್ನು ನನ್ನ ಲಿಖಿತ ತಕರಾರಿನಲ್ಲಿ ಬರೆಸಿಲ್ಲ. ಲಿಖಿತ ಹೇಳಿಕೆಯಲ್ಲಿ ಏನು ಬರೆಸಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಐಟಂ ನಂ. 6 ರ ಮನೆಯನ್ನು ನನ್ನ ಗಂಡನೆ ಕಟ್ಟಿಸಿದ್ದರು ಎಂದರೆ ಸರಿಯಲ್ಲ.

ನಾನು ನನ್ನ ಪರವಾಗಿ ಮಾತ್ರ ಈ ದಾವೆಯಲ್ಲಿ ಸಾಕ್ಷಿ ಹೇಳುತ್ತಿದ್ದೇನೆ. ಐಟಂ ನಂ. 6 ಮನೆಯನ್ನು ಕಟ್ಟಲು ಪರವಾಣಿಗೆ, ನಿವೇಶನದ ಕ್ರಯ ಪತ್ರ ಹಾಜರು ಪಡಿಸಿಲ್ಲ. ಅವುಗಳನ್ನು

ಹಾಜರು ಪಡಿಸಿದರೆ ಸತ್ಯ ಗೊತ್ತಾಗುತ್ತದೆ ಎಂದುಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಐಟಂ ನಂ. 7 ನ ಕೆಎ 45 ಎಂ. 5040 ಕ್ರಿಟಾ ಕಾರು ನಮ್ಮ ಕುಟುಂಬದಲ್ಲಿ ಇದೆ ಎಂದರೆ ಸರಿ. ಸದರಿ ಕಾರನ್ನು ನನ್ನ ಮಗ ದಾವಾ ಸ್ವತ್ತುಗಳಿಂದ ಬಂದ ಆದಾಯದಿಂದ ಖರೀದಿ ಮಾಡಿರುವುದು ಎಂದರೆ ಸರಿಯಲ್ಲ. ಸ್ವಂತ ಆದಾಯದಿಂದ ಕಾರು ಖರೀದಿ ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ, ಆದರ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನಿಜಾಂಶ ಹೊರಗಡೆ ಬರುತ್ತದೆ ಎಂದು ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.